‘ಸಾರಿ, ರಾಜೀವ್. ಎಡಿಟರ್ ನಿಮಗೊಂದು ಅಸೈನ್‌ಮೆಂಟ್ ಹೇಳಿದ್ದಾರೆ. ನಾಳೆ ಸಿಎಂ ಹುಟ್ಟು ಹಬ್ಬವಂತೆ. ಅವರ ಜಾತಿಯವರು, ಅಭಿಮಾನಿಗಳು ಸೇರಿ ನಾಲ್ಕು ಪುಟಗಳ ಆ್ಯಡ್ ಪುಲ್‌ಔಟ್ ತರೋಕೆ ಪ್ಲಾನ್ ಮಾಡಿದ್ದಾರೆ. ಅದಕ್ಕೆ ಮುಕ್ಕಾಲು ಪುಟದಷ್ಟು ಎಡಿಟೋರಿಯಲ್ ಕಂಟೆಂಟನ್ನು ನಾವು ಬರೆದು ಕೊಡಬೇಕಂತೆ... ರಾಜೀವ್‌ಗೆ ಹೇಳಿ ಬರೆದು ಕೊಡ್ತಾರೆ. ಅವರಿಗೆ ಸಿಎಂ ಬಗ್ಗೆ ಚೆನ್ನಾಗಿ ಗೊತ್ತಿದೆ’ ಎಂದು ಎಡಿಟರ್ ಹೇಳಿದರು. ನೀವು ರಜೆಯಲ್ಲಿ ಇದ್ದೀರಿ ಅಂದೆ. ಅದಕ್ಕವರು, ಫೋನ್ ಮಾಡ್ರಿ ಬಂದು ಬರಕೊಟ್ಟು ಹೋಗಲಿ. ಅದೆಷ್ಟೊತ್ತಿನ ಕೆಲಸ. ಬೇಕಾದರೆ ನಾಳೆ ರಜೆ ತಗಳೋಕೆ ಹೇಳಿ ಅಂದರು. ಎಲ್ಲಿದ್ದೀರಿ ಅಂತ ಹೇಳಿದರೆ ಆಫೀಸಿನ ಕಾರು ಕಳಿಸ್ತೀನಿ ಬಂದು ಬರೆದುಕೊಡಿ ಅಂದರು.

ಜಾಹೀರಾತು ಪುರವಣಿಗೆ ‘ರಾಜ್ಯ ರಥದ ವಿಜಯಸಾರಥಿ’ ಅನ್ನೋ ಹೆಡ್ಡಿಂಗನ್ನೂ ಸಿಎಂ ಅಭಿಮಾನಿಗಳೇ ಸೂಚಿಸಿದ್ದರು! ಸಿಎಂ ಸಾಹೇಬರ ಸಾಧನೆಗಳನ್ನೆಲ್ಲ ಬರೆದು ಮುಗಿಸುವ ಹೊತ್ತಿಗೆ ಒಂಬತ್ತು ಗಂಟೆ ದಾಟಿತ್ತು. ನಡು ನಡುವೆ ಸುಹಾಸನ ಬಾಡಿ ಮಾರ್ಚರಿಯಲ್ಲೇ ಇರೋದು ನೆನಪಾಗಿ ಬಾಡಿ ತಗಂಡು ಹೋಗಲು ಬರ್ತೀವಿ ಅಂದವರು ಬಂದರೋ, ಇಲ್ಲವೋ ಗೊತ್ತಾಗಲಿಲ್ಲ ಎಂದು ಪೇಚಾಡಿಕೊಳ್ಳುತ್ತಾ ಎರಡು ಸಲ ಸ್ಟೇಷನ್ನಿಗೆ ಫೋನ್ ಮಾಡಿದ್ದ. ಮೂರನೇ ಫೋನ್ ಎತ್ತಿದ ನೈಟ್‌ಡ್ಯೂಟಿ ಪೀಸಿಗೆ ರಾನಡೆಯ ಬಾಡಿಯನ್ನು ಮಾರ್ಚರಿಯಲ್ಲಿ ಇಟ್ಟಿರುವ ವಿಷಯವನ್ನು ಸಾದ್ಯಂತ ವಿವರಿಸಿದ ಮೇಲೆ ಅವನು ‘ಸರಿ, ಸರಿ ಬಾಡಿ ಯಾವಾಗ ತಗಂಡು ಹೋಗ್ತೀರಿ ಎಂದು ಕೇಳಿದ. ಬೇಗ ತಗಂಡು ಹೋಗಿ, ಅಲ್ಲಿಗೆ ಬಂದು ಬೀಳೋ ಹೆಣಗಳ ರಾಶಿಯಲ್ಲಿ ನಿಮ್ಮ ಹುಡುಗನ ಹೆಣ ಹುಡುಕೋಕೆ ಕಷ್ಟ ಆಗಬಹುದು. ಅಲ್ಲಿ ಹೆಗ್ಗಣಗಳಿವೆ ಅಂತ ಕೇಳಿದ್ದೀನಿ. ಹೆಣಗಳ ಮುಖ, ಮೂತಿ ಬಿಡದೆ ಕಚ್ಚಿ ತಿಂದಾಕ್ತವೆ. ಆಮೇಲೆ ಗುರುತು ಹಿಡಿಯೋಕೆ ಕಷ್ಟ ಆಗಬಹುದು’ ಎಂದು ಹೇಳಿದ್ದನ್ನು ಕೇಳಿ ರಾಜೀವನಿಗೆ ಭಯವಾಯಿತು.

ಬಾಡಿ ತಗಂಡು ಹೋಗೋಕೆ ಬರ್ತೀವಿ ಅಂದವರು ಎಲ್ಲಿದ್ದಾರೋ? ಅವರಿಗೆ ಬಾಡಿ ಕೊಡಿಸಿಬಿಟ್ಟರೆ ನನ್ನ ಜವಾಬ್ದಾರಿ ಮುಗಿಯುತ್ತೆ ಅಂದುಕೊಳ್ಳುತ್ತಿರುವಾಗ

